ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೆ, ವಿಧಾನಪರಿಷತ್ತಿನಿಂದ ಅಂಗೀಕಾರವಾದ ರೂಪದಲ್ಲಿರುವ ''1998ರ ಕರ್ನಾಟಕ ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.''

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ, ವಿಧಾನಪರಿಷತ್ತಿನಿಂದ ಅಂಗೀಕಾರವಾದ ರೂಪದಲ್ಲಿರುವ ''1998ರ ಕರ್ನಾಟಕ ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಶ್ರೀ ಜೆ.ಹೆಚ್.ಪಟೇಲ್(ಮುಖ್ಯಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೆ, ನಾವು ಮೆಜಾರಿಟಿ ನಂಬರ್‌ನಲ್ಲಿ ಗೆದ್ದಿರುತ್ತೇವೆ. ಟಿಕ್ಕಿಕಲಿ ಅವರ ಪಾರ್ಟಿಯವರು ಯಾರೋ ಒಬ್ಬರು ಇರುತ್ತಾರೆ. ಆಗ ನಾವು ಏನು ಮಾಡಬೇಕು? ನಮ್ಮ ಅನುಕೂಲವನ್ನು ನಾವು ನೋಡಿಕೊಳ್ಳಬೇಕಲ್ಲಾ, ನಾವು ಅದನ್ನೇ ಮಾಡಿದ್ದೇವೆ.

3. ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ (ತಿದ್ದುಪಡಿ) ವಿಧೇಯಕ, 1998

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಆರ್.ಕೃಷ್ಣಪ್ಪ (ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯಗಳ ರಾಜ್ಯಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೆ, ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ ''1998ರ ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.''

ಪ್ರಸ್ತಾವ ಮಂಡಿಸಲ್ಪಟ್ಟಿತು.

+ ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಈಗ 3

ಪರ್ಸೆಂಟ್ ಇದ್ದುದನ್ನು 6 ಪರ್ಸೆಂಟ್ ಮಾಡುತ್ತಿದ್ದಾರೆ. ಅವರು 6 ಪರ್ಸೆಂಟ್‌ನ್ನು ಎಲ್ಲಿಂದ ತರುತ್ತಿದ್ದಾರೆ ನನಗೆ ಗೊತ್ತಾಗುತ್ತಿಲ್ಲ. ಇಷ್ಟೊಂದು ಹಣವನ್ನು ಬೇರೆ ಲೋಕಲ್ ಅಥಾರಿಟಿಯವರು ಕೊಡುವುದಕ್ಕೆ ತಯಾರಾಗಿದ್ದಾರಾ? ದಟ್ ಇಸ್ ದಿ ಡಿಫಿಕಲ್ಟಿ 3 ಪರ್ಸೆಂಟ್ ಹೆಚ್ಚಿಗೆ ಹಣವಾಗಲಿ ಎಂದು 6 ಪರ್ಸೆಂಟ್‌ಗೆ ತಿದ್ದುಪಡಿಯನ್ನು ತಂದಿದ್ದಾರೆ. ಲೋಕಲ್ ಅಥಾರಿಟಿ, ಬೇರೆಯವರು 6 ಪರ್ಸೆಂಟ್‌ಗೆ ಇಂಪ್ಲಿಮೆಂಟ್ ಮಾಡಿ ಅವರು ಇವರಿಗೆ ಆ ಹಣವನ್ನು ರೆಮಿಟ್ ಮಾಡುತ್ತಾರಾ ಎನ್ನುವ ಪ್ರಶ್ನೆ ಇದರಲ್ಲಿದೆ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ (ಬಾದಾಮಿ): ಮಾನ್ಯ ಉಪಾಧ್ಯಕ್ಷರೆ, ಒಂದು ಅನುಮಾನವಿದೆ. ಅವರೇನು ಕಂದಾಯ ವಸೂಲಿ ಮಾಡಿದ್ದಾರೆ ಮೊದಲು ಮೂರು ಪರ್ಸೆಂಟ್, ಅದು ಎಷ್ಟು ವಸೂಲಿ ಮಾಡಿದ್ದಾರೆ? ಈಗ 6 ಪರ್ಸೆಂಟ್ ಮಾಡಿದ್ದಾರೆ. ಯಾವ ಪಂಚಾಯಿತಿಯಲ್ಲೂ ಕಂದಾಯ ವಸೂಲಿ ಮಾಡಿಲ್ಲ. ಯಾವ ಜಿಲ್ಲಾಪಂಚಾಯಿತಿಯವರು ಮತ್ತು ತಾಲ್ಲೂಕು ಪಂಚಾಯಿತಿಯವರು 3 ಪರ್ಸೆಂಟ್ ಹಣವನ್ನು ವಸೂಲಿ ಮಾಡಿಲ್ಲ. 3ಪರ್ಸೆಂಟ್ ಹಣವನ್ನೇ ವಸೂಲಿ ಮಾಡಿಲ್ಲ ಇನ್ನು 6 ಪರ್ಸೆಂಟ್ ವಸೂಲಿ ಮಾಡುವ ಉದ್ದೇಶ ಅದರ ಬಗ್ಗೆ ಸ್ವಲ್ಪ ಮಾನ್ಯ ಮಂತ್ರಿಗಳು ಸ್ಪಷ್ಟೀಕರಣ ಕೊಡಬೇಕು.

ಶ್ರೀ ಆರ್.ಕೃಷ್ಣಪ್ಪ (ವಯಸ್ಕರ ಶಿಕ್ಷಣ ರಾಜ್ಯ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ಸಾರ್ವಜನಿಕ ಗ್ರಂಥಾಲಯ ಕಾಯಿದೆ 1965ರ 30ನೆಯ ವಿಧಿ ಅನ್ವಯ ಆಯಾಯ ಜಿಲ್ಲೆಗಳು ವಸೂಲಿಯಾಗುವ ಕಂದಾಯದಲ್ಲಿ ಶೇಕಡ 3ರಷ್ಟನ್ನು ಕೊಡುತ್ತಿದ್ದುದನ್ನು ಈಗ ಶೇಕಡ 6ರಷ್ಟು ಕೊಡಬೇಕೆಂದು ಮಾಡಿದ್ದೇವೆ. ಕಾರಣ ಏನೆಂದರೆ, 1976ರಲ್ಲಿ ಅತಿವೃಷ್ಟಿ ಮತ್ತು ಅನಾವೃಷ್ಟಿ ಇದ್ದಾಗ ಶ್ರೀಮಾನ್ ದೇವರಾಜ್ ಅರಸ್‌ರವರು 1 ಎಕರೆಯಿಂದ 10ಎಕರೆವರೆಗೆ ಕಂದಾಯವನ್ನು ಮನ್ನಾ ಮಾಡಿದ್ದರಿಂದ ಆದಾಯ ಬರತಕ್ಕದ್ದು ಕಡಿಮೆಯಾಗಿದ್ದರಿಂದ ಅದನ್ನು ಶೇಕಡ 6ರಷ್ಟಕ್ಕೆ ಏರಿಸುವ ಪರಿಸ್ಥಿತಿ ಬಂತು. ಒಟ್ಟಾರೆ ನಿಜ ಹೇಳಬೇಕೆಂದರೆ, ವಿದ್ಯುಚ್ಛಕ್ತಿ ಕಾಗದ, ನೀರು, ಬೈಂಡಿಂಗ್, ಬಿಲ್ಸ್ ಮುಂತಾದುವುಗಳ ಬೆಲೆ ಗಗನಕ್ಕೆ ಏರಿರುವುದರಿಂದ ಹಳ್ಳಿಯ ಜನರಿಗೆ ಗ್ರಾಮಾಂತರ ಪ್ರದೇಶಗಳಲ್ಲಿ ಉತ್ತಮವಾದ ಪಠ್ಯಪುಸ್ತಕ, ಗ್ರಂಥಾಲಯಗಳನ್ನು ಕೊಡುವುದಕ್ಕೋಸ್ಕರ ಕಟ್ಟಡಗಳಿಗೆ ಸುಣ್ಣುಬಣ್ಣ ಹೊಡೆಸುವುದಕ್ಕೋಸ್ಕರ ಹೆಚ್ಚು ಉತ್ಪನ್ನ ಬೇಕಾಗಿರುವುದರಿಂದ ಇದನ್ನು ಆರ್ಥಿಕ ಇಲಾಖೆಯವರು ಒಪ್ಪಿದ್ದಾರೆ. ಜೊತೆಗೆ ರೆವಿನ್ಯೂ ಇಲಾಖೆಯವರು ಒಪ್ಪಿರುವುದರಿಂದ, ಮೇಲ್ಮನೆಯಲ್ಲಿ ಒಪ್ಪಿರುವುದರಿಂದ ಇಲ್ಲೂ ಕೂಡ ಇದಕ್ಕೆ ಎಲ್ಲರೂ ಒಪ್ಪಿಗೆಯನ್ನು ನೀಡಬೇಕೆಂದು ಕೋರುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ: ಮೂರು ಪರ್ಸೆಂಟ್ ಇದ್ದಾಗ ಎಷ್ಟು ಹಣ ಬರುತ್ತಿತ್ತು ಎನ್ನವುದನ್ನು ಅವರು ಹೇಳಲಿಲ್ಲ.

ಶ್ರೀ ಆರ್.ಕೃಷ್ಣಪ್ಪ: ಮೂರು ಪರ್ಸೆಂಟ್ ಇದ್ದಾಗ 23 ಲಕ್ಷ ರೂ; 6 ಪರ್ಸೆಂಟ್ ಮಾಡಿರುವುದರಿಂದ 46 ಲಕ್ಷ ರೂ. ಬರುತ್ತದೆ.

ಶ್ರೀ ಎಸ್.ಸುರೇಶ್‌ಕುಮಾರ್ (ರಾಜಾಜಿನಗರ): ಸತ್ಯಾಂಶ ಏನೆಂದರೆ, ಮಾನ್ಯ ಕೃಷ್ಣಪ್ಪನವರಿಗೆ ಗೊತ್ತಿದೆ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಎಷ್ಟರಮಟ್ಟಿಗೆ ಲೈಬ್ರರಿ ಸೆಸ್ ಕಲೆಕ್ಟ್ ಮಾಡಿದರು ಎಂದು. ಅದನ್ನು ನಿಮ್ಮ ಲೈಬ್ರರಿಗಳಿಗೆ ಕೊಟ್ಟಿದ್ದಾರೆಯೆ? ಎಲ್ಲಿ ಕೊಟ್ಟಿದ್ದಾರೆ? ಎಷ್ಟು ಕೊಟ್ಟಿದ್ದಾರೆ ಹೇಳಿ.

ಶ್ರೀ ಆರ್.ಕೃಷ್ಣಪ್ಪ: ಇದು ನಗರಪ್ರದೇಶಗಳಿಗೆ ಬರುವುದಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಬರುತ್ತದೆ.

ಪರ್ಯಾಲೋಚನಾ ಪ್ರಸ್ತಾವ

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ:

''ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ (ತಿದ್ದುಪಡಿ) ವಿಧೇಯಕ, 1998ನ್ನು ಪರ್ಯಾಲೋಚಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 3 ರವರೆಗೆ

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ ''ಖಂಡ 2ರಿಂದ 3ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2ರಿಂದ 3ರವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)ಂ

ಖಂಡ 1 ಇತ್ಯಾದಿ

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ ''ಮೊದಲನೆಯ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಆರ್.ಕೃಷ್ಣಪ್ಪ (ವಯಸ್ಕರ ಶಿಕ್ಷಣ ರಾಜ್ಯ ಸಚಿವರು): ಮಾನ್ಯ ಉಪಾಧ್ಯಕ್ಷರೆ, ''ವಿಧಾನ ಪರಿಷತ್ತಿನಲ್ಲಿ ಅಂಗೀಕೃತವಾದ ರೂಪದಲ್ಲಿರುವ 1998ರ ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ (ತಿದ್ದುಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.''

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ ''ವಿಧಾನ ಪರಿಷತ್ತಿನಲ್ಲಿ ಅಂಗೀಕೃತವಾದ ರೂಪದಲ್ಲಿರುವ 1998ರ ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು''.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

4. ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ (ತಿದ್ದುಪಡಿ) ವಿಧೇಯಕ 1998

ಶ್ರೀ ಕೆ.ವೆಂಕಟೇಶ್ (ಪ್ರದೇಶಾಭಿವೃದ್ಧಿ ಮತ್ತು ಕಾಡಾ ರಾಜ್ಯ ಸಚಿವರು) ಮಾನ್ಯ ಉಪಾಧ್ಯಕ್ಷರೆ, ''ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1998ರ ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.''

ಪ್ರಸ್ತಾವ ಮಂಡಿಸಲ್ಪಟ್ಟಿತು.

+ ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು): ಮಾನ್ಯ ಉಪಾಧ್ಯಕ್ಷರೆ, ಇದರ ಬಗ್ಗೆ ಹೆಚ್ಚಿಗೆ ಮಾತನಾಡಬೇಕಾಗಿಲ್ಲ. ಡಿಸ್ಟ್ರಿಕ್ಟ್ ರೀಆರ್ಗನೈಸೇಷನ್ ಆದಮೇಲೆ ದಾವಣಗೆರೆಗೆ ಸೇರಿದಂತಹ ಹರಪನಹಳ್ಳಿ, ಕೊಪ್ಪಳ ಜಿಲ್ಲೆ ಆದಕ್ಕೆ ಕೆಲವು ತಾಲ್ಲೂಕು ಸೇರಿಸಿ ಕಾನೂನು ಮಾಡಿದೆ. ಇದಕ್ಕೆ ನಮ್ಮೆಲ್ಲರ ಸಪೋರ್ಟ್ ಇದೆ. ಆ ಮಾತು ಬೇರೆ. ಆದರೆ ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್‌ಗೆ ಮಾನ್ಯ ಮುಖ್ಯ ಮಂತ್ರಿಗಳು ಹಿಂದೆ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ನಾವು ಹೋದ ಸಲ ಡೆಲಿಗೇಷನ್ ಹೋದಾಗ ಪ್ರಕಾಶ್‌ರವರು ಇದ್ದರು. ಎಲ್ಲಾ ಶಾಸಕರು ಕೂಡ ಭೇಟಿಯಾಗಿದ್ದೆವು. ಹೋದಸಲ 60 ಕೋಟಿ ರೂಪಾಯಿ ಬಜೆಟ್‌ನಲ್ಲಿ ಸೇರಿಸಿ ಕೇವಲ 45 ಕೋಟಿ ರೂಪಾಯಿ ಮಾತ್ರ ಬಿಡುಗಡೆ ಮಾಡಿದ್ದಾರೆ. ಇದು ಕಡಿಮೆಯಾಗುತ್ತಾ ಇದೆ. 1991-92ರಲ್ಲಿ ಮತ್ತು 1990-91ರಲ್ಲಿ ಸುಮಾರು 60ಕೋಟಿ 65ಕೋಟಿ ರೂಪಾಯಿ ಕೊಡುತ್ತಿದ್ದರು. ಇವತ್ತಿನ ಇನ್‌ಫ್ಲೇಷನ್‌ಗೆ 100 ಕೋಟಿ ರೂಪಾಯಿ